**CC 486/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 486/2023**

**ಸಿ ಡಬ್ಲೂ - 3**
**ಪಿ ಡಬ್ಲೂ - 3**

**ಸಾಕ್ಷಿಯ ಹೆಸರು - ಶಿವಕುಮಾರ**
**ತಂದೆಯ ಹೆಸರು - ಸುಬ್ರಮಣಿ**
**ವಯಸ್ಸು - 37 ವರ್ಷಗಳು**
**ಉದ್ಯೋಗ - ಆಟೋ ಚಾಲಕ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 05-07-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ 1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ 1(ಸಿ) ಎಂದು ಗುರುತಿಸಲಾಯಿತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿಃ 3 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಪೋಲಿಸ ಠಾಣೆಯಲ್ಲಿ 2022 ರಲ್ಲಿ ಚಾಸಾ -2 ರವರೊಂದಿಗೆ ಹೋದಾಗ ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿನ ಅಂಶಗಳು ನನಗೆ ಗೊತ್ತಿಲ್ಲ. ಪೋಲಿಸರು ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿಲ್ಲ.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಇನ್ನೊಂದು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **5** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **5(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ **4-** ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿಃ **6** ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಇನ್ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಪಂಚನಾಮೆಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ ಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 18-10-2022 ರಂದು ಸಂಜೆ 05.45 ಗಂಟೆಗೆ ಪೋಲಿಸರು ಪಂಚರಾಗಿ ಬರುವಂತೆ ನನ್ನನ್ನು ಮತ್ತು ಚಾಸಾ -2 ರವರನ್ನು ಕೇಳಿಕೊಂಡಾಗ ನಾವುಗಳು ಒಪ್ಪಿ ಸಂಜೆ 06.00 ಗಂಟೆಗೆ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣಕ್ಕೆ ಹೋಗಿದ್ದೇವು ಅಂದರೆ ಸರಿಯಲ್ಲ. ನಾವುಗಳು ನಿಂತು ನೋಡುತ್ತಿದ್ದಾಗ ಪಾರ್ಸಲ್ ಕಚೇರಿಯ ಮುಂಭಾಗದಲ್ಲಿ ಮೂವರು ವ್ಯಕ್ತಿಗಳು ಕಪ್ಪು ಬ್ಯಾಗ್ ಹಿಡಿದುಕೊಂಡು ನಿಂತಿದ್ದು ಕಂಡಿತ್ತು ಅಂದರೆ ಸರಿಯಲ್ಲ. ಸದರಿಯವರು ಪೋಲಿಸರನ್ನು ನೋಡಿ ತಮ್ಮ ಮುಖ ಮುಚ್ಚಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ.

**ಸಿ ಡಬ್ಲೂ - 3**
**ಪಿ ಡಬ್ಲೂ - 3**

ಆಗ ದಾಳಿ ಮಾಡಿ ನ್ಯಾಯಾಲಯದ ಮುಂದಿರುವ ಇಬ್ಬರು ಆರೋಪಿತರನ್ನು ಸ್ಥಳದಲ್ಲಿ ಹಿಡಿದು ಅವರ ಕೈಯಲ್ಲಿದ್ದ ಚೀಲವನ್ನು ತೆಗೆದು ನೋಡಿದಾಗ ನ್ಯಾಯಾಲಯದ ಮುಂದಿರುವ ಮು ಮಾ 1 ರ ನಕಲಿ ಬಂಗಾರದ ನಾಣ್ಯಗಳು, ಅವರ ಅಂಗಶೋಧನೆ ಮಾಡಿದಾಗ 1 ನೇ ಆರೋಪಿಯ ಬಳಿ ರೂ. 2,000/- ಮತ್ತು ಲಾವಾ ಕಂಪನಿಯ ಮೊಬೈಲ್ ಸಿಕ್ಕವು ಅಂದರೆ ಸರಿಯಲ್ಲ. ಅವುಗಳನ್ನು ನಮ್ಮ ಸಮಕ್ಷಮ ಜಪ್ತು ಮಾಡಿ ನಿಪಿಃ 1 ರ ಪಂಚನಾಮೆ ಬರೆದಿರುತ್ತಾರೆ ಅಂದರೆ ಸರಿಯಲ್ಲ. ನಾನು ಸ್ಥಳದಲ್ಲಿಯೇ ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಕಚ್ಚಾ ನಕಾಶೆ ಮತ್ತು ಫೋಟೋಗಳನ್ನು ಅಲ್ಲಿಯೇ ತೆಗೆಯಲಾಗಿತ್ತು ಅಂದರೆ ಸರಿಯಲ್ಲ.

ದಿಃ 19-10-2022 ರಂದು ಬೆಳಿಗ್ಗೆ 09.00 ಗಂಟೆಗೆ 1 ನೇ ಆರೋಪಿ ಪೋಲಿಸ ಠಾಣೆಯಲ್ಲಿ ತಾನು ಅವರೊಂದಿಗೆ ಬಂದಿದ್ದ ತಿಮ್ಮಪ್ಪ ತನ್ನ ಅಂಗಡಿಗೆ ನಕಲಿ ಬಂಗಾರದ ನಾಣ್ಯಗಳನ್ನು ತಂದು ಕೊಡುತ್ತಿದ್ದಾಗಿ ಮತ್ತು ಸದರಿ ಅಂಗಡಿಯನ್ನು ತೋರಿಸುವುದಾಗಿ ತಿಳಿಸಿದ್ದ ಅಂದರೆ ಸರಿಯಲ್ಲ. ಪೋಲಿಸರು ನನ್ನನ್ನು ಮತ್ತು ಚಾಸಾ -2 ರವರನ್ನು ಕರೆದುಕೊಂಡು ಹೋದ ಕೂಡ್ಲಗಿ ಪಟ್ಟಣದ ಮದಕರಿ ಸರ್ಕಲ್ ನಿಂದ ಬಂಗಾರದ ಅಂಗಡಿಗಳ ಓಣಿಯಲ್ಲಿರುವ ಅಂಗಡಿಗೆ ಬೆಳಿಗ್ಗೆ 10.30 ಗಂಟೆಗೆ ಹೊಗಿದ್ದೇವು ಅಂದರೆ ಸರಿಯಲ್ಲ. ಸದರಿ ಅಂಗಡಿಯಲ್ಲಿ ಬಂಗಾರದ ಮತ್ತು ಬೆಳ್ಳಿಯ ಆಭರಣಗಳನ್ನು ಮಾಡುವ ಉಪಕರಣಗಳು ಇದ್ದವು ಅಂದರೆ ಸರಿಯಲ್ಲ. 1 ನೇ ಆರೋಪಿ ಕಬ್ಬಿಣದ ಅಚ್ಚಿನ ಬಿಟ್ ಗಳನ್ನು ಹಾಜರುಪಡಿಸಿದ್ದ ಅಂದರೆ ಸರಿಯಲ್ಲ. ಆಗ ಒಂದು ಪಂಚನಾಮೆಯನ್ನು ಬರೆಯಲಾಗಿತ್ತು ಅಂದರೆ ಸರಿಯಲ್ಲ. ಆಗಲೇ ನಿಪಿಃ 5 ಕ್ಕೆ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

ನನ್ನ ಸಮಕ್ಷಮ ಪಂಚನಾಮೆಗಳು ಆಗಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಎಸ್ ಎಂ., ವಕೀಲರಿಂದಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.